ಎರಡನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಮ.ಎಫ್.ಸಿ
ನ್ಯಾಯಾಲಯ ಬೀದರ್
ಸಿ.ಸಿ.ನಂ **2272–2016**

ಪ್ರಾಸಾ–2
ಚಾಸಾ–1
ದಿಃ **24–08–2023**

ಹೆಸರು : ಬಲ್ಲಪ್ಪ ನಂದಗಾವಿ
ತಂದೆ ಹೆಸರು : ಚೆನ್ನಪ್ಪ
ವಯಸು : 29
ಉದ್ಯೋಗ : ಎ.ಸಿ.ಪಿ ಉತ್ತರ ಹುಬ್ಬಳ್ಳಿ
ವಾಸ ಸ್ಥಳ : ಹುಬ್ಬಳ್ಳಿ.

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತ್ತು
ಮುಖ್ಯ ವಿಚಾರಣೆಃ ಹಿರಿಯ ಸಹಾಯಕ ಅಭಿಯೋಜಕರವರಿಂದಃ

ದಿ. 19–07–2021 ರಿಂದ 03–04–2022 ರವರೆಗೆ ಪ್ರಭಾರಿ ಡಿಎಸ್‌ಪಿ ಅಂತ ಬೀದರ್‌ನಲ್ಲಿ ಸೇವೆ ಸಲ್ಲಿಸಿರುತ್ತೇನೆ.

ದಿ. 18–02–2022 ರಂದು ಸಾ. 5.15 ಗಂಟೆಗೆ ಬೀದರ್‌ನ ಕೇಂದ್ರ ಬಸ್ ನಿಲ್ದಾಣದಲ್ಲಿ ನಾನು ಇದ್ದಾಗ ಆಗ ಸಾಯಿ ಪ್ಯಾಲೇಸ್ ಲಾಡ್ಜ್ ಒಂದು ಹೊಟೇಲ್‌ನಲ್ಲಿ ವೆಶ್ಯವಾಟಿಕೆ ದಂದೆ ನಡೆದಿದೆ ಅಂತ ಒಂದು ಬಾತ್ಮಿ ಬಂತು. ಆಗ ನಾನು ಇಬ್ಬರು ಪಂಚರಾದ ಚಾಸಾ 2, 3 ರವರನ್ನು ಬರಮಾಡಿಕೊಂಡು , ಚಾಸಾ 5 ರಿಂದ 9 ರವರನ್ನು ಕರೆದುಕೊಂಡು ಸ್ಥಳಕ್ಕೆ ಹೋದೆವು , ಆಗ 3 ನೇ ಆರೋಪಿ ಅಲ್ಲಿ ಮ್ಯಾನೇಜರ್ ಆಗಿದ್ದ ಆತನನ್ನು ಕೇಳಿದೇವು , ನಮ್ಮ ಬಾತ್ಮಿ ಪ್ರಕಾರ 2 ನೇ ಮಹಡಿಯ ರೂಮ್‌ನಂ. 306 ಗೆ ಹೊದೆವು ಆಗ ಅದು ಬಾಗಿಲು ಹಾಕಿತ್ತು , ಆಗ ಅವರು ಬಾಗಿಲು ತೆಗೆದರು ಅಲ್ಲಿ ನೋಡಿದಾಗ ಒಬ್ಬ ಗಂಡು ಮಗ , ಒಬ್ಬ ಹೆಣ್ಣು ಮಗಳು ಇದ್ದಳು . ಮೊದಲು ಹೆಣ್ಣು ಮಗಳನ್ನು ವಿಚಾರ ಮಾಡಿದಾಗ ಅವಳು ತನ್ನ ಹೆಸರು ಸ್ವಿಟಿ ತಂದೆ ಅಭಿಶೇಕ್ , ಸಾ. ಜೊಯ ನಗರ ಪಶ್ಚಿಮ ತ್ರಿಪುರ ಅಗರತಲ ಅಂತ ಹೇಳಿದಳು. ಇಲ್ಲಿ ಯಾಕೆ ಇದ್ದಿರಿ ಅಂತ ಕೇಳಿದರೆ ನನಗೆ ಬೆಳ್ಳಿಗ್ಗೆ ಒಬ್ಬ ವ್ಯಕ್ತಿ 2 ನೇ ಆರೊಪಿ ಇಲ್ಲಿ ಆಸಾಮಿಗಳಿದ್ದಾರೆ ನೀನು ಅವರ ಜೊತೆ ಸಹಕರಿಸಿದರೆ ಪ್ರತಿಯೊಬ್ಬರು ನಿನಗೆ ತಲಾ ರೂ. 500/– ಕೊಡುತ್ತಾರೆ ಅಂತ ಹೇಳಿದರು. ಹೀಗಾಗಿ ನಾನು ಕಲಬುರಗಿಯಿಂದ ಮ. 2.30 ಗಂಟೆಗೆ ಈ ಲಾಡ್ಜ್‌ಗೆ ಬಂದಿದ್ದೆನೆ ಅಂತ ಹೇಳಿದರು.

ಅವಳ ಜೊತೆ ಇದ್ದಂತಹ ವ್ಯಕ್ತಿಯ ಹೆಸರನ್ನು ಕೇಳಲಾಗಿ ಅವನು ತನ್ನ ಹೆಸರು ಮಹಮ್ಮದ್ ಖಯುಮ್ ತಂದೆ ಮಹಮ್ಮದ್ ಸಮಿಯುದ್ದೀನ್ ಅಂತ ಹೇಳಿದ. ಇಲ್ಲಿ ಯಾಕೆ ಇದ್ದಿಯಾ ಅಂತ ಕೇಳಿದಾಗ , 2 ನೇ ಆರೋಪಿ ನನಗೆ ಫೋನ್ ಮಾಡಿ ಒಬ್ಬ ಹೆಣ್ಣು ಮಗಳು ಇದ್ದಾಳೆ , ನೀನು ರೂ. 500/– ಹಣ ಕೊಟ್ಟರೆ ನೀನು ಅವಳ ಜೊತೆ ಉಳಿದುಕೊಳ್ಳಲಿಕ್ಕೆ ವ್ಯವಸ್ಥೆ ಮಾಡಿಸುತ್ತೇವೆ ಮತ್ತು ಅವಳು ನಿನಗೆ ಸಹಕರಿಸುತ್ತಾಳೆ ಅಂತ ಹೇಳಿದ. ಆತ 3 ಗಂಟೆಗೆ ಲಾಡ್ಜ್‌ಗೆ ಬಂದಿದ್ದಾಗಿ ಹೇಳಿದ. ಅಲ್ಲಿ ನಾವ ಚೆಕ್ ಮಾಡಿದಾಗ ಅಲ್ಲಿ ಒಂದು ಟೇಬಲ್ ಇತ್ತು. ಟೇಬಲ್ ಮೇಲೆ ಒಂದು ಕಾಂಡಮ್ ಪ್ಯಾಕೆಟ್ ಇತ್ತು , ಆ ಪ್ಯಾಕೆಟ್ ಮೇಲೆ ಜರೂರತ್ ಟೈಮ್ ಮ್ಯಾ ಕ್ಸ್ ಕಾಂಡಮ್ ಅಂತ ಇತ್ತು. ಅದರಲ್ಲಿ ಕೆಲವೊಂದು ಕಾಂಡಮ್ಸ್ ಇದ್ದವು , ಅವುಗಳನ್ನು ಇನ್ನು ಉಪಯೋಗಿರಲಿಲ್ಲ . ಬಾಗಿಲ ಪಕ್ಕದಲ್ಲಿ ಪರೀಶಿಲಿಸಿದಾಗ ಅಲ್ಲಿ ಒಂದು ಕಸದ ಬುಟ್ಟಿ ಇತ್ತು. ಅದರಲ್ಲಿ 6 ಉಪಯೋಗಿಸಿದಂತಹ ಕಾಂಡೊಮ್ ಪ್ಯಾಕೆಟ್‌ಗಳು ಇದ್ದವು.

ಹೀಗಾಗಿ ಹೊಟ್ಟೆ ಪಾಡಿಗಾಗಿ ಬಂದ ಹೆಣ್ಣು ಮಕ್ಕಳನ್ನು ಆರೋಪಿತರು ವೇಶ್ಯಾವಾಟಿಕೆಗೆ ಬಳಿಸಿಕೊಂಡು ತಮ್ಮ ದಂಧೆ ನಡೆಸುತ್ತಿರುವುದು ಕಂಡು ಬಂದಿತು. ಅಲ್ಲಿ ಸಿಕ್ಕಂತಹ ಕಾಂಡೋಮ್ ಗಳನ್ನು ಪಂಚರ ಸಮಕ್ಷಮ ವಶಪಡಿಸಿಕೊಂಡೆವು. ನೊಂದ ಮಹಿಳೆಯನ್ನು ಮೈಲೂರ್‌ನ ಸಾಂತ್ವನ ಕೇಂದ್ರಕ್ಕೆ ಕಳುಹಿಸಿಕೊಟ್ಟೆವು. ಹೊಟೇಲ್ ಮಾಲಿಕರನ್ನು ಕೇಳಿದಾಗ ನಾಗನಾಥ ಪಾಟೀಲ್ ಆರೋಪಿ 4 ಅಂತ ಹೇಳಿದರು. ಫುರಖಾನ್ ಮತ್ತು ನಾಗನಾಥ ಲಾಡ್ಜ್‌ನಲ್ಲಿ ಇರಲಿಲ್ಲ. ಸೀಜ್ ಮಾಡಿದಂತಹ ವಸ್ತುಗಳನ್ನು ನಾವು ತೆಗದುಕೊಂಡು ಹೋದಂತಹ ಲ್ಯಾಪ್‌ಟಾಪ್ ಮತ್ತು ಪೊರ್ಟೆಬಲ್ ಪ್ರಿಂಟರ್ ಮೂಲಕ 5.45 ರಿಂದ 6.45 ರವರೆಗೆ ಪಂಚನಾಮೆ ಮಾಡಿರುತ್ತೇವೆ. ವಶಪಡಿಸಿಕೊಂಡಂತಹ ಮು.ಮಾ ಹಾಗೂ ಇಬ್ಬರು ಆರೋಪಿತರಾದ ನಂ. 1 ಮತ್ತು 3 ಹಾಗೂ ಒಂದು ಜಪ್ತಿ ಪಂಚನಾಮೆಯನ್ನು ಜ್ಞಾಪನ ಪತ್ರ ದೊಂದಿಗೆ ಎಸ್ ಹೆಚ್ ಓ ಗೆ ಮುಂದಿನ ಕ್ರಮಕ್ಕಾಗಿ ಕೊಟ್ಟಿರುತ್ತೇನೆ . ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿ 1 ಮತ್ತು 3 ರವರನ್ನು ನೋಡಿ ಗುರುತಿಸಿರುತ್ತಾರೆ. ಮು.ಮಾಲನ್ನು ನೋಡಿದರೆ ಗುರುತಿಸುತ್ತೇನೆ.

ಸ್ಥಳ ಮತ್ತು ಜಪ್ತಿ ಪಂಚನಾಮೆಯನ್ನು ಈಗಾಗಲೆ ನಿಪಿ 1 ಅಂತ

ಗುರುತಿಸಲಾಗಿದ್ದು , ಸಾಕ್ಷಿಯ ಸಹಿಯನ್ನು 1 (ಬಿ) ಎಂದು , ಜ್ಞಾಪನ ಪತ್ರವನ್ನು ನಿಪಿ 2 ಎಂದು , ಸಾಕ್ಷಿಯ ಸಹಿಯನ್ನು 2 (ಎ) ಎಂದು ಗುರುತಿಸಲಾಯಿತು.

ನಾನು ದೂರು ಕೊಟ್ಟಾಗ ಸಮಯ 7.30 ಗಂಟೆಯಾಗಿತ್ತು.

<u>ಪಾಟೀ ಸವಾಲು : 3 , 4 ನೇ ಆರೋಪಿತರ ಪರ ಶ್ರೀ ಜೆ.ಜೆ. ವಕೀಲರಿಂದ :</u>

ರೂಮ್ ನಂ. 306 ಅಕ್ಕಪಕ್ಕದಲ್ಲಿ ಇರುವಂತಹ ರೂಮ್‌ನಲ್ಲಿ ಇದ್ದಂತಹ ವ್ಯಕ್ತಿಗಳ ಸಮಕ್ಷಮದಲ್ಲಿ ಪಂಚನಾಮೆ ಮಾಡಿರುವುದಿಲ್ಲ. ನನಗೆ ಬಾತ್ಮಿ ಬಂದ ವಿಷಯವನ್ನು ಕೇಸ್ ಡೈರಿನಲ್ಲಿ ನಮೂದು ಮಾಡಿಲ್ಲ ಅಂದರೆ ಸಾಕ್ಷಿ ಸ್ಟೇಷನ್ ಡೈರಿಯಲ್ಲಿ ಮಾಡಿದ್ದೇನೆ ಅಂತ ಹೇಳುತ್ತಾರೆ. ನನ್ನ ಪಂಚನಾಮೆಯಲ್ಲಿ ಕಾಂಡೋಮ್‌ನ್ನು ಯಾರು ತಂದಿದ್ದಾರೆ , ಎಲ್ಲಿಂದ ತಂದಿದ್ದಾರೆ ಅಂತ ನಮೂದು ಮಾಡಿಲ್ಲ ಅಂದರೆ ಸಾಕಷಿ ಅದು ನನಗೆ ಸಂಬಂಧಿಸಿದ್ದು ಇರುವುದಿಲ್ಲ , ಐ ಓ ಗೆ ಸಂಬಂಧಿಸಿದ್ದು ಇರುತ್ತದೆ ಅಂತ ಹೇಳುತ್ತಾರೆ. ಕಾಂಡೋಮ್‌ನ್ನು ಸೀಜ್ ಮಾಡಿದ ನಂತರ ಸೀಲ್ ಮಾಡಿದ ಬಗ್ಗೆ ನನ್ನ ಪಂಚನಾಮೆಯಲ್ಲಿ ನಮೂದಿಸಿಲ್ಲ ಅಂದರೆ ಸರಿಯಲ್ಲ. ಎಸ್.ಹೆಚ್.ಡಿ ಯಲ್ಲಿ ನಮೂದಿಸಿದ ಬಗ್ಗೆ ನಾನು ನೋಡಿರುವುದಿಲ್ಲ. ಬಾತ್ಮಿ ಯಾವ ಮೂಲಕ ಬಂತು ಪಂಚನಾಮೆಯಲ್ಲಿ ನಮೂದಿಸಿಲ್ಲ ಅಂದರೆ ಇರಬಹುದು ಅಂತ ಹೇಳುತ್ತಾರೆ. ಬಾತ್ಮಿ ಬಂದ ವಿಷಯವನ್ನು ಎಸ್ ಹೆಚ್ ಓ ಗೆ ಒಂದು ಹಾಳೆಯಲ್ಲಿ ಹಚ್ಚಿಕೊಟ್ಟಿರುವುದಿಲ್ಲ. ಮಾಹಿತಿ ಬಂದ ವಿಷಯವನ್ನು ನನ್ನ ವೈಯಕ್ತಿಕ ಡೈರಿಯಲ್ಲಿ ನಮೂದಿಸಿಲ್ಲ.

ಆರೋಪಿತರು ರೂಮ್ ಒಳಗಡೆ ಹೋದ ಬಗ್ಗೆ ಸಿಸಿಟಿವಿ ನೋಡಿದ್ದಿರಾ , ಸೀಜ್ ಮಾಡಿದ್ದಿರಾ ಅಂದರೆ ಸಾಕ್ಷಿ ನನಗೆ ಬರುವುದಿಲ್ಲ ತನಿಖಾದಿಕಾರಿಗೆ ಸಂಬಂಧ ಪಡುತ್ತದೆ ಅಂತ ಹೇಳುತ್ತಾರೆ. ಆರೋಪಿತರು ಯಾವುದೇ ವೇಶ್ಯವಾಟಿಕೆ ದಂಧೆಮಾಡುವುದಾಗಲಿ ಹಾಗೂ ವೇಶ್ಯವಾಟಿಕೆ ಸಂಬಂಧ ಪಟ್ಟಂತೆ ಇನ್ನಿತರ ಕೃತ್ಯಗಳನ್ನು ಮಾಡುವುದಾಗಲಿ ಮಾಡಿರುವುದಿಲ್ಲ ಅಂದರೆ ಸರಿಯಲ್ಲ. ಸುಳ್ಳು ದೂರು ಸಲ್ಲಿಸಿ , ಸುಳ್ಳು ಪ್ರಕರಣ ದಾಖಲಿಸಿದ್ದೇನೆಂದರೆ ಸರಿಯಲ್ಲ.

ದಿ. 18-02-2022 ರಂದು ಸಾ. 5.15 ಗಂಟೆಗೆ ಬೀದರ್‌ನ ಕೇಂದ್ರ ಬಸ್ ನಿಲ್ದಾಣದಲ್ಲಿ ನಾನು ಇದ್ದಾಗ ಆಗ ಸಾಯಿ ಪ್ಯಾಲೇಸ್ ಲಾಡ್ಜ್ ಒಂದು ಹೊಟೇಲ್‌ನಲ್ಲಿ ವೇಶ್ಯವಾಟಿಕೆ ದಂದೆ ನಡೆದಿದೆ ಅಂತ ಒಂದು ಬಾತ್ಮಿ ಬಂತು. ಆಗ ನಾನು ಇಬ್ಬರು ಪಂಚರಾದ ಚಾಸಾ 2, 3 ರವರನ್ನು ಬರಮಾಡಿಕೊಂಡು , ಚಾಸಾ 5 ರಿಂದ 9 ರವರನ್ನು ಕರೆದುಕೊಂಡು ಸ್ಥಳಕ್ಕೆ ಹೋದೆವು , ಆಗ 3 ನೇ ಆರೊಪಿ ಅಲ್ಲಿ ಮ್ಯಾನೇಜರ್ ಆಗಿದ್ದ ಆತನನ್ನು ಕೇಳಿದೇವು , ನಮ್ಮ ಬಾತ್ಮಿ ಪ್ರಕಾರ 2 ನೇ ಮಹಡಿಯ ರೂಮ್‌ನಂ. 306 ಗೆ ಹೊದೆವು ಆಗ ಅದು ಬಾಗಿಲು ಹಾಕಿತ್ತು , ಆಗ ಅವರು ಬಾಗಿಲು ತೆಗೆದರು ಅಲ್ಲಿ ನೋಡಿದಾಗ ಒಬ್ಬ ಗಂಡು ಮಗ , ಒಬ್ಬ ಹೆಣ್ಣು ಮಗಳು ಇದ್ದಳು . ಮೊದಲು ಹೆಣ್ಣು

ಮಗಳನ್ನು ವಿಚಾರ ಮಾಡಿದಾಗ ಅವಳು ತನ್ನ ಹೆಸರು ಸ್ವಿಟಿ ತಂದೆ ಅಭಿಶೇಕ್ , ಸಾ. ಜೊಯ ನಗರ ಪಶ್ಚಿಮ ತ್ರಿಪುರ ಅಗರತಲ ಅಂತ ಹೇಳಿದಳು ಅಂತ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಇಲ್ಲಿ ಯಾಕೆ ಇದ್ದಿರಿ ಅಂತ ಕೇಳಿದರೆ ನನಗೆ ಬೆಳ್ಳಿಗ್ಗೆ ಒಬ್ಬ ವ್ಯಕ್ತಿ 2 ನೇ ಆರೊಪಿ ಇಲ್ಲಿ ಆಸಾಮಿಗಳಿದ್ದಾರೆ ನೀನು ಅವರ ಜೊತೆ ಸಹಕರಿಸಿದರೆ ಪ್ರತಿಯೊಬ್ಬರು ನಿನಗೆ ತಲಾ ರೂ. 500/- ಕೊಡುತ್ತಾರೆ ಅಂತ ಹೇಳಿದರು. ಹೀಗಾಗಿ ನಾನು ಕಲಬುರಗಿಯಿಂದ ಮ. 2.30 ಗಂಟೆಗೆ ಈ ಲಾಡ್ಜ್‌ಗೆ ಬಂದಿದ್ದೆನೆ ಅಂತ ಹೇಳಿದರು ಅಂತ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಅವಳ ಜೊತೆ ಇದ್ದಂತಹ ವ್ಯಕ್ತಿಯ ಹೆಸರನ್ನು ಕೇಳಲಾಗಿ ಅವನು ತನ್ನ ಹೆಸರು ಮಹಮ್ಮದ್ ಖಯುಮ್ ತಂದೆ ಮಹಮ್ಮದ್ ಸಮಿಯುದ್ದೀನ್ ಅಂತ ಹೇಳಿದ. ಇಲ್ಲಿ ಯಾಕೆ ಇದ್ದಿಯಾ ಅಂತ ಕೇಳಿದಾಗ , 2 ನೇ ಆರೋಪಿ ನನಗೆ ಫೋನ್ ಮಾಡಿ ಒಬ್ಬ ಹೆಣ್ಣು ಮಗಳು ಇದ್ದಾಳೆ , ನೀನು ರೂ. 500/- ಹಣ ಕೊಟ್ಟರೆ ನೀನು ಅವಳ ಜೊತೆ ಉಳಿದುಕೊಳ್ಳಲಿಕ್ಕೆ ವ್ಯವಸ್ಥೆ ಮಾಡಿಸುತ್ತೇವೆ ಮತ್ತು ಅವಳು ನಿನಗೆ ಸಹಕರಿಸುತ್ತಾಳೆ ಅಂತ ಹೇಳಿದ ಅಂತ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆತ 3 ಗಂಟೆಗೆ ಲಾಡ್ಜ್‌ಗೆ ಬಂದಿದ್ದಾಗಿ ಹೇಳಿದ. ಅಲ್ಲಿ ನಾವ ಚೆಕ್ ಮಾಡಿದಾಗ ಅಲ್ಲಿ ಒಂದು ಟೇಬಲ್ ಇತ್ತು. ಟೇಬಲ್ ಮೇಲೆ ಒಂದು ಕಾಂಡಮ್ ಪ್ಯಾಕೆಟ್ ಇತ್ತು , ಆ ಪ್ಯಾಕೆಟ್ ಮೇಲೆ ಜರೂರತ್ ಟೈಮ್ ಮ್ಯಾ ಕ್ಸ್ ಕಾಂಡಮ್ ಅಂತ ಇತ್ತು. ಅದರಲ್ಲಿ ಕೆಲವೊಂದು ಕಾಂಡಮ್ಸ್ ಇದ್ದವು , ಅವುಗಳನ್ನು ಇನ್ನು ಉಪಯೋಗಿರಲಿಲ್ಲ ಅಂತ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಬಾಗಿಲ ಪಕ್ಕದಲ್ಲಿ ಪರೀಶಿಲಿಸಿದಾಗ ಅಲ್ಲಿ ಒಂದು ಕಸದ ಬುಟ್ಟಿ ಇತ್ತು. ಅದರಲ್ಲಿ 6 ಉಪಯೋಗಿಸಿದಂತಹ ಕಾಂಡೊಮ್ ಪ್ಯಾಕೆಟ್‌ಗಳು ಇದ್ದವು ಅಂತ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಹೀಗಾಗಿ ಹೊಟ್ಟೆ ಪಾಡಿಗಾಗಿ ಬಂದ ಹೆಣ್ಣು ಮಕ್ಕಳನ್ನು ಆರೋಪಿತರು ವೇಶ್ಯಾವಾಟಿಕೆಗೆ ಬಳಿಸಿಕೊಂಡು ತಮ್ಮ ದಂಧೆ ನಡೆಸುತ್ತಿರುವುದು ಕಂಡು ಬಂದಿತು. ಅಲ್ಲಿ ಸಿಕ್ಕಂತಹ ಕಾಂಡೋಮ್ ಗಳನ್ನು ಪಂಚರ ಸಮಕ್ಷಮ ವಶಪಡಿಸಿಕೊಂಡೆವು. ನೊಂದ ಮಹಿಳೆಯನ್ನು ಮೈಲೂರ್‌ನ ಸಾಂತ್ವನ ಕೇಂದ್ರಕ್ಕೆ ಕಳುಹಿಸಿಕೊಟ್ಟೆವು. ಹೊಟೇಲ್ ಮಾಲಿಕರನ್ನು ಕೇಳಿದಾಗ ನಾಗನಾಥ ಪಾಟೀಲ್ ಆರೋಪಿ 4 ಅಂತ ಹೇಳಿದರು.

ಫುರಖಾನ್ ಮತ್ತು ನಾಗನಾಥ ಲಾಡ್ಜ್‌ನಲ್ಲಿ ಇರಲಿಲ್ಲ. ಸೀಜ್ ಮಾಡಿದಂತಹ ವಸ್ತುಗಳನ್ನು ನಾವು ತೆಗದುಕೊಂಡು ಹೋದಂತಹ ಲ್ಯಾಪ್‌ಟಾಪ್ ಮತ್ತು ಪೊರ್ಟೆಬಲ್ ಪ್ರಿಂಟರ್ ಮೂಲಕ 5.45 ರಿಂದ 6.45 ರವರೆಗೆ ಪಂಚನಾಮೆ ಮಾಡಿರುತ್ತೇವೆ. ವಶಪಡಿಸಿಕೊಂಡಂತಹ ಮು.ಮಾ ಹಾಗೂ ಇಬ್ಬರು ಆರೋಪಿತರಾದ ನಂ. 1 ಮತ್ತು 3 ಹಾಗೂ ಒಂದು ಜಪ್ತಿ ಪಂಚನಾಮೆಯನ್ನು ಜ್ಞಾಪನ ಪತ್ರದೊಂದಿಗೆ ಎಸ್ ಹೆಚ್ ಓ ಗೆ ಮುಂದಿನ ಕ್ರಮಕ್ಕಾಗಿ ಕೊಟ್ಟಿರುತ್ತೇನೆ ಅಂತ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲು : 1, 2 ನೇ ಆರೋಪಿತರ ಪರ ಶ್ರೀ ಪಿ. ಕೆ. ವಕೀಲರು ಮೇಲೆ ಹೇಳಿದ ಪಾಟೀಸವಾಲನ್ನು ಅಳವಡಿಸಿಕೊಳ್ಳಲು ವಿನಂತಿಸಿದ್ದರಿಂದ ಅಳವಡಿಸಿಕೊಳ್ಳಲಾಯಿತು.

ಮರುವಿಚಾರಣೆ ಇಲ್ಲ.

(ನನ್ನ ಉಕ್ತ ಲೇಖನದ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಮೇಲೆ ಬೆರಳಚ್ಚು ಮಾಡಲಾಗಿದೆ.)

ಓ.ಹೆ.ಕೆ.ಸರಿ.ಇದೆ,

ಎರಡನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ ಮತ್ತು
ಜೆ.ಎಮ.ಎಫ.ಸಿ ಬೀದರ .